# ತಂತ್ರಜ್ಞಾನ ಉನ್ನತೀಕರಣ ನಿಧಿಯೋಜನೆ

## ಕೈಮಗ್ಗ ಕ್ಷೇತ್ರ

### 1) ಪ್ರಸ್ತಾವನೆ:

ಕೈಮಗ್ಗ ಕ್ಷೇತ್ರವು ದೇಶದ ಪಾರಂಪರಿಕ ಮತ್ತು ಸಂಸ್ಕೃತಿಯನ್ನು ಕಾಪಾಡುವಲ್ಲಿ ಹೆಸರುವಾಸಿಯಾಗಿದೆ ಮತ್ತು ದೇಶದ ಆರ್ಥಿಕ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಕ್ಷೇತ್ರವು ದೇಶದಲ್ಲಿಯೇ ಒಂದು ಪ್ರಮುಖ ಉದ್ಯೋಗದಾತನಾಗಿದ್ದು ಆಂದಾಜಿನಂತೆ ಕೃಷಿ ಕ್ಷೇತ್ರದ ನಂತರದಲ್ಲಿ ಎರಡನೇ ಸ್ಥಾನ ಹೊಂದಿದ್ದು ಸುಮಾರು 65 ಲಕ್ಷ ಜನರು ನೇರವಾಗಿ ಅಥವಾ ಪರೋಕ್ಷವಾಗಿ ನೇಕಾರಿಕೆ ಮತ್ತು ಸಂಬಂಧಿತ ಉದ್ಯೋಗಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕೈಮಗ್ಗ ಕ್ಷೇತ್ರ ವಿಕೇಂದ್ರೀಕರಣಗೊಂಡಿರುತ್ತದೆ ಮತ್ತು ಚೆದುರಿರುತ್ತದೆ. ಕ್ರಯದ ತೊಂದರೆ, ಪುರಾತನ ತಾಂತ್ರಿಕತೆ ಮತ್ತು ಮಾರುಕಟ್ಟೆ ಅನಾನುಕೂಲಕತೆಗಳಿಂದ ಪವರ್‌ಲೂಮ್ ಮತ್ತು ಮಿಲ್ಲುಗಳ ಕ್ಷೇತ್ರಗಳಿಗೆ ಹೋಲಿಕೆ ಮಾಡಿದಾಗ ಈ ಕ್ಷೇತ್ರವು ಬಳಲುತ್ತಿರುವುದನ್ನು ಕಾಣಬಹುದು.

ಭಾರತ ಸರ್ಕಾರ, ಜವಳಿ ಸಚಿವಾಲಯ, ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಗಳು, ರಾಜ್ಯಸರ್ಕಾರಗಳ ಮೂಲಕ ಕೈಮಗ್ಗ ಕ್ಷೇತ್ರವನ್ನು ಪ್ರೋತ್ಸಾಹಿಸುತ್ತಿದ್ದು, ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಆಂತರಿಕ ಸರಬರಾಜು, ಉತ್ಪಾದನೆ, ಮಾರುಕಟ್ಟೆ ಇತ್ಯಾದಿಗಳಿಂದ ಪ್ರೋತ್ಸಾಹ ನೀಡುತ್ತಿವೆ. ಇದರಿಂದಾಗಿ ಕ್ಷೇತ್ರದಲ್ಲಿನ ಅಭಿವೃದ್ಧಿಗೆ ಹೊಸದಾದ/ವೈವಿಧ್ಯಮಯ ಉತ್ಪಾದನೆಗಳನ್ನು ದೇಶೀಯ ಮತ್ತು ವಿದೇಶಿ ಮಾರುಕಟ್ಟೆಗೆ ಒದಗಿಸಲು ನೆರವಾಗಿದೆ. ಅಂದರೆ ಮಗ್ಗಪೂರ್ವ ಮತ್ತು ಮಗ್ಗದ ನಂತರದ ಕ್ಷೇತ್ರಗಳಲ್ಲಿ ತಾಂತ್ರಿಕತೆಯನ್ನು ಉನ್ನತೀಕರಿಸುವ ಅವಶ್ಯಕತೆ ಇರುವುದು. ಇದರಿಂದ ಸಂಪೂರ್ಣ ಅಭಿವೃದ್ಧಿಪಡಿಸುವಲ್ಲಿ ಬೆಳಕು ಚೆಲ್ಲುವ ಮೂಲಕ ಉತ್ಪಾದಕತೆ ಮತ್ತು ಗುಣಮಟ್ಟವನ್ನು ಹೆಚ್ಚಿಸಿ ಉತ್ತಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಬಹುದು.

### 2) ಯೋಜನೆಯ ಉದ್ದೇಶಗಳು

ಇದರ ಉದ್ದೇಶಗಳು ಈ ಕೆಳಕಂಡಂತೆ ಇರುತ್ತವೆ:

- ಎಲ್ಲಾ ಸೌಲಭ್ಯಗಳನ್ನು ಒಂದೇ ಸ್ಥಳದಲ್ಲಿ ಸ್ಥಾಪಿಸುವಂತೆ ಫಲಾನುಭವಿಗಳಿಗೆ ಪ್ರೋತ್ಸಾಹಿಸುವುದು ಇದರಿಂದಾಗಿ ಎಲ್ಲಾ ಉತ್ಪನ್ನಗಳ ಚಟುವಟಿಕೆಗಳ ಆಂತರಿಕ ಸಂಪರ್ಕವು ಸುಲಭವಾಗುತ್ತದೆ.
- ಉತ್ಪಾದನೆ ಆಧಾರಿತ ಉನ್ನತೀಕರಿಸಿದ ತಾಂತ್ರಿಕೆಯನ್ನು ಮಗ್ಗಪೂರ್ವ/ಮಗ್ಗದ/ಮಗ್ಗ ನಂತರದ ಗುಣಮಟ್ಟದ ನಿಯಂತ್ರಣ ಇತ್ಯಾದಿಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಒಂದೇ ಸೂರಿನಡಿಯಲ್ಲಿ ಸ್ಥಾಪಿಸುವುವು, ಇದರಿಂದಾಗಿ ಸಾಮರ್ಥ್ಯವನ್ನು ಬಲಪಡಿಸಿ ಅಭಿವೃದ್ಧಿಪಡಿಸಿದ ಉತ್ಪಾದಕತೆ ಮತ್ತು ಗುಣಮಟ್ಟದೊಂದಿಗೆ ಸಗಟು ಉತ್ಪಾದನೆಯನ್ನು ಕೈಗೊಂಡು ದೇಶೀಯ ಮತ್ತು ವಿದೇಶ ಮಾರುಕಟ್ಟೆಗೆ ಬಿಡುಗಡೆ ಮಾಡುವುದು.
- ಉತ್ಪಾದನೆಯ ಅವಧಿಯನ್ನು ಕಡಿಮೆ ಮಾಡಿ ಉತ್ಪಾದಿತ ವಸ್ತುಗಳನ್ನು ನಿಗದಿತ ಸಮಯದಲ್ಲಿ ವಿತರಣೆ ಖಚಿತಪಡಿಸಬಹುದು.
- ದೇಶೀಯ ಮತ್ತು ವಿದೇಶೀ ಮಾರುಕಟ್ಟೆಗಳಿಗೆ ಸ್ಪರ್ಧಾತ್ಮಕವಾಗಿ ಉತ್ಪನ್ನಗಳ ದರ ಮತ್ತು ಉತ್ತಮಗುಣಮಟ್ಟವನ್ನು ಕಾಯ್ದುಕೊಳ್ಳುವುದು ನೀಡಿಕೆಯನ್ನು ಖಚಿತಪಡಿಸುವುದು.

**3) ಕೈಮಗ್ಗ ಕ್ಷೇತ್ರಕ್ಕಾಗಿ ಟಿಯುಎಫ್‌ಯೋಜನೆ ಅಡಿಯಲ್ಲಿ ದೊರೆಯುವ ಪ್ರಯೋಜನಗಳು:**

1.ಸಾಲ ನೀಡುವ ಏಜೆನ್ಸಿಯ ರೂಪಾಯಿ ಅವಧಿ ಸಾಲ (ಆರ್‌ಟಿಎಲ್) ದ ಮೇಲಿನ ಸಾಮಾನ್ಯ ಬಡ್ಡಿಗೆ ಶೇ.5 ರಷ್ಟು ಬಡ್ಡಿಯ ಮರುಪಾವತಿಸಲಾಗುವುದು.

ಅಥವಾ

2.ಶೇ. 25ರಷ್ಟು ಬಂಡವಾಳ ಸಬ್ಸಿಡಿ

3.**ಸೂಚನೆ:** ಯೋಜನೆಗಳಿಗೆ ಸಂಬಂಧಿಸಿದಂತೆ ಮೇಲಿನಂತೆ ಫಲಾನುಭವಿಗಳು ಪ್ರಸ್ತಾವನೆಯನ್ನು ಸಂಬಂಧಪಟ್ಟ ಬ್ಯಾಂಕಿಗೆ ನೇರವಾಗಿ ಸಲ್ಲಿಸಬಹುದು ಮತ್ತು ಬ್ಯಾಂಕ್ ಅಗತ್ಯ ದಾಖಲೆಗಳೊಂದಿಗೆ ಜವಳಿ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿ ಬಡ್ಡಿಯ ಮರುಪಾವತಿ ಕೋರುವುದು.

**4) ಟಿಯುಎಫ್ ಯೋಜನೆ ಅಡಿಯಲ್ಲಿ ಕೈಮಗ್ಗಗಳನ್ನು ಒಳಪಡಿಸುವುದು**

**ಕೈಮಗ್ಗ ನೇಯ್ಗೆ**

1.ಕೈಮಗ್ಗ ವಲಯವು ಟಿಯುಎಫ್‌ನ ಸೌಲಭ್ಯ ಪಡೆಯಲು ಅರ್ಹವಾಗಿದ್ದು ಈಗಾಗಲೇ ಪಟ್ಟಿಯಲ್ಲಿ ಸೇರಿರುವ ಯಂತ್ರೋಪಕರಣಗಳಿಗೆ ಈ ಯೋಜನೆಯು ಬಗ್ಗೆ ಸರ್ಕಾರದ ನಿರ್ಣಯದಂತೆ ಕಾಲಕಾಲಕ್ಕೆ ತಿದ್ದುಪಡಿಯಾಗುವುದನ್ನು ಗಮನಿಸಿ ಸೌಲಭ್ಯ ಪಡೆಯಬಹುದು ಮತ್ತು ಇತರೆ ಕ್ಷೇತ್ರಗಳಿಗೆ ಅನುಮತಿ ನೀಡಿದಂತೆ ವಿದ್ಯುತ್ ಮಗ್ಗ  ಮಿಲ್ ವಲಯವೂ ಸೇರಿದಂತೆ ಸೌಲಭ್ಯ ಪಡೆಯಬಹುದು. ಕೈಮಗ್ಗ ವಲಯದಲ್ಲಿ ನೇಯ್ಗೆ ಚಟುವಟಿಕೆಯು ಮಾತ್ರ ವಿದ್ಯುತ್ ಮಗ್ಗ ಮತ್ತು ಮಿಲ್ ವಲಯಕ್ಕಿಂತ ಬೇರೆಯಾಗಿದ್ದು, ಇತರೆ ಚಟುವಟಿಕೆಗಳು, ವಿಶೇಷವಾಗಿ ಸಂಸ್ಕರಣೆಯು ಒಂದೇ ಆಗಿರುತ್ತದೆ.

2.ವಿದ್ಯುತ್ತಿನ ಬಳಕೆ ಇಲ್ಲದ ನಿರ್ವಹಣೆ ಒಳಗೊಂಡಿರುವ ನಿರ್ದಿಷ್ಠ ವಿಶಿಷ್ಠ ಗುರ್ತಿನ ಕೈಮಗ್ಗಗಳು ಈ ಯೋಜನೆಯಡಿ ಒಳಪಡುತ್ತದೆ.

**5) ನೆರವಿನ ಪರಿಮಾಣ :**

ಕೈಮಗ್ಗ ವಲಯದ ಹೊಸ ಯಂತ್ರೋಪಕರಣಗಳ ಮತ್ತು ಸಾಧನ ಸಲಕರಣೆಗಳ ಖರೀದಿಗೆ ಶೇ 25ರಷ್ಟು ಬಂಡವಾಳ ಸಬ್ಸಿಡಿಯನ್ನು ಮಗ್ಗಪೂರ್ವ ಮತ್ತು ಮಗ್ಗಗಳ ನಂತರದ ಚಾಲನೆ ಬಗ್ಗೆ ಕೈಮಗ್ಗಗಳ/ಕೈಮಗ್ಗಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಪರೀಕ್ಷೆ ಹಾಗೂ ಗುಣಮಟ್ಟದ ನಿಯಂತ್ರಣ ಸಾಧನ ಸಲಕರಣೆಗಳ ಖರೀದಿಗೆ ಕೈಮಗ್ಗ ಉತ್ಪಾದನಾ ಘಟಕಗಳಿಂದ ಪ್ರತ್ಯೇಕ ಉಪಯೋಗಕ್ಕೆ ಬಂಡವಾಳದ ಮಿತಿಯನ್ನು ಪ್ರತಿಯೊಂದು ಯೋಜನೆಗೆ ಗರಿಷ್ಟ ರೂ.80.00 ಲಕ್ಷಕ್ಕೆ  ಬಂಡವಾಳದ ಸಬ್ಸಿಡಿ ಗರಿಷ್ಠ ರೂ 20.00 ಲಕ್ಷಗಳನ್ನು ನಿಗದಿಪಡಿಸಿದೆ.

ಈ ಮೇಲಿನ ಕೈಮಗ್ಗ ವಲಯದ ಪ್ರಸ್ತಾವನೆಯು ಪ್ರಸ್ತುತ ಚಾಲನೆಯಲ್ಲಿರುವ "ಟಿಯುಎಫ್‌ಯೋಜನೆಯು ಜವಳಿ ಮತ್ತು ಸೆಣಬು ಕೈಗಾರಿಕೆಯು" ಒಂದು ಭಾಗವಾಗಿದ್ದು ಮತ್ತು ಈ ಪ್ರಸ್ತಾವನೆ ಅಂದರೆ ಶೇ. 25 ರ ಬಂಡವಾಳ ಸಬ್ಸಿಡಿಯು ಹಾಲಿ ಇರುವ ಟಿಯುಎಫ್ ಯೋಜನೆಯ ಪ್ರಸ್ತಾವನೆಯ ಬದಲಾಗಿರುತ್ತದೆ ಹಾಗೂ 2006–07 ರ ಸಾಲಿನಿಂದ ಜಾರಿಯಲ್ಲಿರುತ್ತದೆ.

**6) ಹಣದ ಬಿಡುಗಡೆ**

ಸಾಲದ ಸಂಪರ್ಕದ ಮೇಲೆ ನಡೆಯುತ್ತಿರುವ ಯೋಜನೆಗಳಿಗೆ ಸಬ್ಸಿಡಿ ಬಿಡುಗಡೆಯನ್ನು ನೇರವಾಗಿ ಡಿಸಿ (ಕೈಮಗ್ಗ)ರ ಕಚೇರಿಯಿಂದ ನೀಡಬಹುದಾಗಿದ್ದು ಅದನ್ನು ಹಣಕಾಸು ಸಂಸ್ಥೆಗಳು/ಬ್ಯಾಂಕುಗಳಿಗೆ ಯಂತ್ರೋಪಕರಣಗಳ ಪರಿಶೀಲನೆಯನ್ನು ಸಂಬಂಧಪಟ್ಟ ಅಧಿಕಾರಿಯು ಸಂಬಂಧಿಸಿದ ಪರಿಶೀಲಿಸಿದ ನಂತರ ನೀಡಬಹುದು.

ಒಂದು ವೇಳೆ ಯೋಜನೆಯು ಸಾಲದ ಸಂಪರ್ಕವಿಲ್ಲದೇ ಇರುವ ಸಂದರ್ಭದಲ್ಲಿ ಬಂಡವಾಳ ಸಬ್ಸಿಡಿಯನ್ನು ಡಿಸಿ(ಹೆಚ್‌ಎಲ್) ಕಚೇರಿಯಿಂದ ಫಲಾನುಭವಿಗಳಿಗೆ ಯಂತ್ರೋಪಕರಣ ಮತ್ತು ಸಾಧನ ಸಲಕರಣೆಗಳ ಸ್ಥಾಪನೆ ಮತ್ತು ಅವುಗಳ ಪರಿಶೀಲನೆಯನ್ನು ಸಂಬಂಧಪಟ್ಟ ನೇಕಾರರ ಸೇವಾ ಕೇಂದ್ರದ ಅಧಿಕಾರಿಯಿಂದ್ಲ ನಡೆಸಿದ ನಂತರ ಪಾವತಿಸಬಹುದು.

**7) ಯೋಜನೆಯ ಅವಧಿ**

ಯಂತ್ರೋಪಕರಣಗಳ ಸ್ಥಾಪನೆ ಮತ್ತು ಉತ್ಪಾದನೆ ಆರಂಭ ಮಾಡಲು ಗರಿಷ್ಠ ಅವಧಿ 2 ವರ್ಷಗಳು ಪ್ರತ್ಯೇಕ ಪ್ರಕ್ರಿಯೆಗಳ ಕಾಲಾವಧಿಯು ತಾಂತ್ರಿಕ ಉನ್ನತೀಕರಣದ ವಿಧ ಹಾಗೂ ಯೋಜನೆಯ ಪ್ರದೇಶಗಳನ್ನಾಧರಿಸಿ, ಯೋಜನೆಯ ಅನುಮೋದನೆಯ ದಿನಾಂಕದಿಂದ 2 ವರ್ಷಗಳ ಗರಿಷ್ಠ ಮಿತಿಗೊಳಪಟ್ಟು, ಯೋಜನೆಯಿಂದ ಯೋಜನೆಗೆ ವ್ಯತ್ಯಾಸವಾಗುತ್ತದೆ.

**8. ಅರ್ಹ ಸಂಘಟನೆಗಳು**

ಟಿಯುಎಫ್ ಯೋಜನೆಯಡಿ ಮೇಲ್ಕಂಡ ಬಂಡವಾಳ ಸಹಾಯಧನ ಪ್ಯಾಕೇಜು, ಒಂದು ಕಾರ್ಯಾಗಾರದಲ್ಲಿ ಕನಿಷ್ಟ 10 ಕೈಮಗ್ಗಗಳನ್ನು ಹೊಂದಿರುವ, ಈಗಿರುವ ಕೈಮಗ್ಗ ಘಟಕಗಳಿಗೆ ಲಭ್ಯವಾಗುವುದಲ್ಲದೇ, ಒಂದು ಕಾರ್ಯಾಗಾರದಲ್ಲಿ ಕನಿಷ್ಟ 10 ಕೈಮಗ್ಗಗಳನ್ನು ಸ್ಥಾಪಿಸಲು ಮುಂದಾಗುವ ಹೊಸ ಘಟಕಗಳಿಗೂ ಅನ್ವಯವಾಗುತ್ತದೆ.

ಈ ಯೋಜನೆಯ ಸೌಲಭ್ಯಗಳನ್ನು ಖಾಸಗಿ ಕೈಮಗ್ಗ ಉದ್ದಿಮೆದಾರರು, ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು, ಅಪೆಕ್ಸ್ ಕೈಮಗ್ಗ ಸಹಕಾರ ಸಂಘಗಳು, ರಾಜ್ಯ ಕೈಮಗ್ಗ ನಿಗಮಗಳು, ಸರ್ಕಾರೇತರ ಸೇವಾಸಂಸ್ಥೆಗಳು/ಸ್ವಯಂ ನೆರವು ಗುಂಪುಗಳು (ಕೈಮಗ್ಗದ ಹಿನ್ನೆಲೆ ಉಳ್ಳವು), ರಾಷ್ಟ್ರಮಟ್ಟದ ಕೈಮಗ್ಗ ಸಂಘಟನೆಗಳು ಮುಂತಾದವುಗಳು ಪಡೆದುಕೊಳ್ಳಬಹುದು.

**9. ಯಂತ್ರೋಪಕರಣಗಳು ಮತ್ತು ಸಾಧನ ಸಲಕರಣೆಗಳು**

ಅರ್ಹ ಜವಳಿ ಯಂತ್ರೋಪಕರಣಗಳು ಮತ್ತು ಉಪಕರಣಗಳನ್ನು ವೆಬ್‌ಸೈಟ್ txcindia.com ನಲ್ಲಿ ಕಲಂ 4– ಟಿಯುಎಫ್‌ಎಸ್ ಪುಸ್ತಿಕೆ–ತಂತ್ರಜ್ಞಾನ ಉನ್ನತೀಕರಣ ನಿಧಿಯೋಜನೆ–ಕೇಂದ್ರ ಯೋಜನೆಗಳು–ಪ್ರಗತಿ, ಇಲ್ಲಿ ಪಟ್ಟಿಮಾಡಲಾಗಿದೆ. ಇದು ಕಾಲಕಾಲಕ್ಕೆ ಮಾರ್ಪಾಡಿಗೆ ಒಳಗಾಗುತ್ತಿರುತ್ತದೆ.

**10. ಪ್ರಸ್ತಾವನೆಗಳ ಸಲ್ಲಿಕೆ**

ಅನುಬಂಧ–1 ರಲ್ಲಿನ ಮಾರ್ಗಸೂಚಿಗಳನ್ವಯ ಯೋಜನೆಯ ಪ್ರಸ್ತಾವನೆ ಸಲ್ಲಿಸಬೇಕು.

**11. ಯೋಜನೆಯ ಮೌಲ್ಯಪರಿಶೀಲನಾ ಸಮಿತಿ (ಪಿಎಸಿ)**

ಸಂಬಂಧಿತ ನೇಕಾರರ ಸೇವಾ ಕೇಂದ್ರದ ಪ್ರಾಂತಿಯ ನಿರ್ದೇಶಕರ ನೇತೃತ್ವದ, ಯೋಜನಾ ಮೌಲ್ಯ ಪರಿಶೀಲನಾ ಸಮಿತಿಯು ಯೋಜನೆಯ ಭೌತಿಕ ಮತ್ತು ಆರ್ಥಿಕ ಕಾರ್ಯಸಾಧುತ್ವವನ್ನು ಒರೆಹಚ್ಚಿ, ಉದ್ಯೋಗಾವಕಾಶ ನಿರ್ಮಾಣ, ನೇಕಾರರ ಆದಾಯ, ಉತ್ಪನ್ನ ಅಭಿವೃದ್ಧಿ/ವೈವಿಧ್ಯತೆ, ರಫ್ತು, ಕಾಸ್ಟ್–ಬೆನಿಫಿಟ್ ಅನುಪಾತಗಳಿಗೆ ಸಂಬಂಧಿಸಿದಂತೆ, ಬಿಂಬಿತ ಹುಟ್ಟುವಳಿಯ ಬೆಳಕಿನಲ್ಲಿ ಯೋಜನೆಯ ಮೌಲ್ಯವಿವೇಚನೆ ಮಾಡುವುದು.

ಸಮಿತಿಯ ರಚನೆಯು ಕೆಳಕಂಡತಿರುವುದು :

ಎ) ಸಂಬಂಧಿತ ನೇಕಾರರ ಸೇವಾಕೇಂದ್ರದ ಪ್ರಾಂತೀಯ ನಿರ್ದೇಶಕರು – ಅಧ್ಯಕ್ಷರು
ಬಿ) ಸಂಬಂಧಿತ ರಾಜ್ಯದ ಕೈಮಗ್ಗದ ಪ್ರಭಾರಿ ನಿರ್ದೇಶಕರ ಪ್ರತಿನಿಧಿ – ಸದಸ್ಯರು
ಸಿ) ಸ್ಥಳೀಯ ಜವಳಿ ಇನ್ಸ್‌ಟಿಟ್ಯೂಟ್/ಐಐಹೆಚ್‌ಟಿ/ಎನ್‌ಐಎಫ್‌ಟಿ/ಎನ್‌ಐಡಿ/ಮ್ಯಾನೇಜ್‌ಮೆಂಟ್ ಇನ್ಸ್‌ಟಿಟ್ಯೂಟ್‌ನ ಪ್ರತಿನಿಧಿ– ಸದಸ್ಯರು
ಡಿ) ಅಭಿವೃದ್ದಿ ಆಯುಕ್ತ(ಕೈಮಗ್ಗ)ರಿಂದ ನಾಮಾಂಕಿತರಾದ ಬೇರಾವುದೇ ಅಧಿಕಾರಿ – ಸದಸ್ಯರು
ಇ) ಸಂಬಂಧಿತ ನೇಕಾರರ ಸೇವಾ ಕೇಂದ್ರದ ಇನ್‌ಚಾರ್ಜ್ ಅಧಿಕಾರಿ – ಸಂಚಾಲಕರು

ಇನ್ನು ಮುಂದೆ ಸಮಿತಿಯು ತನ್ನ ಶಿಫಾರಸುಗಳನ್ನು ಯೋಜನಾ ಅನುಮೋದನಾ ಸಮಿತಿಗೆ ಅಂತಿಮ ಪರಿಶೀಲನೆಗಾಗಿ ಸಲ್ಲಿಸುವುದು. ಸಮಿತಿಯು ಯಂತ್ರೋಪಕರಣಗಳು ಮತ್ತು ಸಾಧನ ಸಲಕರಣೆಗಳ ಪಟ್ಟಿಯ ಪರಿಷ್ಕರಣೆಯೂ ಸೇರಿದಂತೆ ತಾಂತ್ರಿಕ ವಿಷಯಗಳ ಬಗ್ಗೆಯೂ ಸಹ ಕಾಲಕಾಲಕ್ಕೆ ಕೈಮಗ್ಗ ಅಭಿವೃದ್ಧಿ ಆಯುಕ್ತರಿಗೆ ಶಿಫಾರಸುಗಳನ್ನು ಮಾಡುವುದು.

**12. ಯೋಜನಾ ಅನುಮೋದನಾ ಸಮಿತಿ**

ಯೋಜನೆಯ ಮೌಲ್ಯ ಪರಿಶೀಲನಾ ಸಮಿತಿಯಿಂದ ಶಿಫಾರಸು ಮಾಡಲ್ಪಟ್ಟ ಯೋಜನೆಯನ್ನು ಅನುಮೋದನೆಗಾಗಿ ಯೋಜನಾ ಅನುಮೋದನಾ ಸಮಿತಿಯ ಮುಂದೆ ಮಂಡಿಸಲಾಗುವುದು. ಕೈಮಗ್ಗದ ಅಭಿವೃದ್ಧಿ ಆಯುಕ್ತರು ಈ ಸಮಿತಿಯ ಮುಖ್ಯಸ್ಥರಾಗಿದ್ದು, ಕೆಳಕಂಡವರು ಈ ಸಮಿತಿಯಲ್ಲಿರುತ್ತಾರೆ.

ಎ) ಐಎಫ್‌ಡಬ್ಲ್ಯು (ಜವಳಿ) ಪ್ರತಿನಿಧಿ
ಬಿ) ಸಂಬಂಧಿತ ನೇಕಾರರ ಸೇವಾಕೇಂದ್ರದ ಪ್ರಾಂತೀಯ ನಿರ್ದೇಶಕರು
ಸಿ) ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಂದ ನಾಮಾಂಕಿತರಾದ ಬೇರಾವುದೇ ಅಧಿಕಾರಿ
ಡಿ) ಸಂಬಂಧಿತ ಜೆಡಿಸಿ(ಕೈಮಗ್ಗ)/ಎಡಿಸಿ(ಕೈಮಗ್ಗ)

**13. ಯೋಜನೆಯ ಉಸ್ತುವಾರಿ**

ಪ್ರತ್ಯೇಕ ಯೋಜನೆಗಳ ಉಸ್ತುವಾರಿಯನ್ನು ಆ ಪ್ರದೇಶದ ವ್ಯಾಪ್ತಿಯ ನೇಕಾರರ ಸೇವಾ ಕೇಂದ್ರಗಳು ನೋಡಿಕೊಳ್ಳುತ್ತವೆ.

ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯು ಕಾಲಕಾಲಕ್ಕೆ ರಾಜ್ಯಗಳಿಗೆ ಭೇಟಿನೀಡಿ ಭೌತಿಕ ತಪಾಸಣೆ ನಡೆಸಿ ಯೋಜನೆಯ ಅನುಷ್ಠಾನದ ಪ್ರಗತಿಯ ಉಸ್ತುವಾರಿಯನ್ನು ಗ್ಘಮನಿಸುವುದು.

**ಅನುಬಂಧ – I**

**ಯೋಜನೆಯ ಪ್ರಸ್ತಾವನೆ ಸಲ್ಲಿಸುವ ವಿಧಾನ**

ಟಿಯುಎಫ್ ಯೋಜನೆ ಅಡಿಯಲ್ಲಿ ಫಲಾನುಭವಿ ಸಂಘಟನೆಯು ಯೋಜನೆಯ ಪ್ರಸ್ತಾವನೆ ಸಲ್ಲಿಸಲು ಮಾರ್ಗಸೂಚಿಗಳು ಕೆಳಕಂಡಂತಿವೆ.

1.ಫಲಾನುಭವಿ ಸಂಸ್ಥೆಯು ಅನುಬಂಧ–II ರಲ್ಲಿ ತನ್ನ ಸಂಸ್ಥೆಯ ಪರಿಚಯ ಪಾರ್ಶ್ವನೋಟ ಹಾಗೂ ಅನುಬಂಧ III ರಲ್ಲಿ ಯೋಜನಾ ವರದಿ ಮತ್ತು ಅಗತ್ಯ ದಾಖಲೆಗಳನ್ನು ಲಗತ್ತಿಸಿ, ಯೋಜನೆಯ ಪ್ರಸ್ತಾವನೆಯನ್ನು ಆ ಪ್ರದೇಶದ ವ್ಯಾಪ್ತಿಯಲ್ಲಿರುವ ನೇಕಾರರ ಸೇವಾ ಕೇಂದ್ರಕ್ಕೆ (ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿ, ಜವಳಿಸಚಿವಾಲಯ) ಸಲ್ಲಿಸಬೇಕು.

2.ಯೋಜನೆಯ ಪ್ರಸ್ತಾವನೆಯು ಸಂಬಂಧಿತ ನೇಕಾರರ ಸೇವಾ ಕೇಂದ್ರದಿಂದ ವಿವರವಾಗಿ ಪರಿಶೀಲಿಸಲ್ಪಡುವುದಲ್ಲದೇ, ಕೇಂದ್ರವು ಪ್ರಸ್ತಾವಿತ ಯೋಜನಾ ಪ್ರದೇಶದ ತಪಾಸಣೆಯನ್ನು ಕೈಗೊಳ್ಳುವುದು. ಪರಿಶೀಲನೆಯು ತೃಪ್ತಿಕರವಾಗಿ ನಡೆದ ನಂತರ, ಯೋಜನೆಯನ್ನು ಅನುಬಂಧ ಖ ಮತ್ತು ಖಖ, ಅಗತ್ಯದಾಖಲೆಗಳು ಹೇಗೂ ತಪಾಸಣಾ ವರದಿಯೊಂದಿಗೆ ಸಂಬಂಧಿತ ಪ್ರಾಂತೀಯ ನಿರ್ದೇಶಕರಿಗೆ ನೀಡಲಾಗುವುದು.

3.ಸಂಬಂಧಿತ ನೇಕಾರರ ಸೇವಾಕೇಂದ್ರದ ಪ್ರಭಾರಿ ಅಧಿಕಾರಿಯಿಂದ ಕಳುಹಿಸಲ್ಪಟ್ಟ ಯೋಜನೆಯ ಪ್ರಸ್ತಾವನೆಯು ಸಂಬಂಧಿತ ನೇಕಾರರ ಸೇವಾ ಕೇಂದ್ರದ ಪ್ರಾಂತೀಯ ನಿರ್ದೇಶಕರ ನೇತೃತ್ವದ ಯೋಜನಾ ಮೌಲ್ಯ ಪರಿಶೀಲನಾ ಸಮಿತಿಯಿಂದ ಪರಿಶೀಲಿಸಲ್ಪಡುವುದು. ಇದಾದ ನಂತರ ಸಮಿತಿಯು ಯೋಜನಾ ಪ್ರಸ್ತಾವನೆಯನ್ನು ಎಲ್ಲಾ ದಾಖಲೆಗಳ ಸಮೇತ, ಅನುಮೋದನೆಗಾಗಿ ಅಥವಾ ಅನ್ಯಕ್ರಮಕ್ಕಾಗಿ ನಿರ್ದಿಷ್ಟ ಶಿಫಾರಸ್ಸುಗಳೊಂದಿಗೆ ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಗೆ ಕಳುಹಿಸುವುದು.

4.ಯಥಾವತ್ ಶಿಫಾರಸ್ಸು ಮಾಡಲ್ಪಟ್ಟ ಯೋಜನಾ ಪ್ರಸ್ತಾವನೆಗಳನ್ನು ತಾತ್ವಿಕ ಅನುಮೋದನೆಗಾಗಿ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ನೇತೃತ್ವದ ಯೋಜನಾ ಅನುಮೋದನಾ ಸಮಿತಿಯ ಮುಂದೆ ಮಂಡಿಸಲಾಗುವುದು ಹಾಗೂ ಅದೇ ಪ್ರಕಾರ ತಿಳಿಸಲಾಗವುದು.